# ಆಹಾ ಸುದ್ದಿ!

★ ಸಸಿತೋಟ



ಕ್ಯಾಲಿಫೋರ್ನಿಯಾದ ಈ ಜೋಡಿ ಜೇಮ್ಸ್ ಮತ್ತು ಆ್ಯಷ್ಲೆ ಮದುವೆಯಾಗಿದ್ದು ಮೌಂಟ್ ಎವೆರೆಸ್ಟ್‌ನ ಬೇಸ್ ಕ್ಯಾಂಪ್‌ನಲ್ಲಿ. ಅಂದರೆ ಸಮುದ್ರ ಮಟ್ಟಕ್ಕಿಂತ 17000 ಅಡಿ ಎತ್ತರದಲ್ಲಿ, –5 ಡಿಗ್ರಿ ಕೊರೆಯುವ ಚಳಿಯಲ್ಲಿ. ಇದಕ್ಕಾಗಿ ಈ ಜೋಡಿ ಹಾಗೂ ಛಾಯಾಚಿತ್ರಗ್ರಾಹಕ ಮೂರು ವಾರ ಚಾರಣ ಮಾಡಿದರಂತೆ. ಮದುವೆ ನಂತರ ಮಧುಚಂದ್ರಕ್ಕೆಂದು ದಂಪತಿ ಗಿರಿಧಾಮ ಹುಡುಕಿಕೊಂಡು ಹೋದರೆ ಈ ಜೋಡಿ ಮದುವೆ ಮುಗಿದ ಕೂಡಲೇ ಅಲ್ಲಿಂದ ಜಾಗ ಖಾಲಿ ಮಾಡಬೇಕಾಯ್ತುಂತೆ, ಹಿಮಪಾತದ ಭೀತಿಯಿಂದ.



ಹೈದರಾಬಾದ್‌ನಲ್ಲಿ ನಿರ್ಮಿಸಲಾದ ಈ ಬಸ್ ತಂಗುದಾಣಕ್ಕೆ ಒಂದು ಸಾವಿರಕ್ಕಿಂತ ಅಧಿಕ ಪ್ಲಾಸ್ಟಿಕ್ ಬಾಟಲ್‌ಗಳನ್ನು ಬಳಸಲಾಗಿದೆಯಂತೆ. 'ರಿಸೈಕಲ್ ಇಂಡಿಯ' ಯೋಜನೆಯಡಿ ಇದನ್ನು ನಿರ್ಮಿಸಲಾಗಿದ್ದು, ಮಹಾನ್ ಭಾರತದಲ್ಲಿ ಈ ಬಾಟಲ್‌ಗಳು ಮತ್ಯಾವುದಕ್ಕೋ ರಿಸೈಕಲ್ ಆಗದಿದ್ದರೆ ಸಾಕು.



ಅಮೆರಿಕಾದ ಸ್ಯಾನ್ ಫ್ರಾನ್ಸಿಸ್ಕೋದಲ್ಲಿ ನಡೆದ ವಿಚಿತ್ರ ಬೀದಿ ಹಬ್ಬದಲ್ಲಿ ಈಕೆ ತೊಟ್ಟುಕೊಂಡ ದಿರಿಸು ಫ್ಲಾಪಿ ಡಿಸ್ಕ್‌ಗಳಿಂದ ಮಾಡಿದ್ದಂತೆ. ಡಿಜಿಟಲ್ ಕಸದಿಂದ ಡಿಜಿಟಲ್ ರಸ!

ವೆನೆಜುವೆಲಾದಲ್ಲಿ ಪೂಪೂಟೊವ್ ಎಂಬ ಹೊಸ ಬಗೆಯ ಕಾಕ್‌ಟೈಲ್ ತಯಾರಿ ಜೋರಾಗಿದೆಯಂತೆ. ಸರ್ಕಾರದ ವಿರುದ್ಧ ಪ್ರತಿಭಟನೆ ನಡೆಸುತ್ತಿರುವವವರು ಭದ್ರತಾ ಪಡೆಯ ಮೇಲೆ ಇದನ್ನು ಎಸೆಯುತ್ತಿದ್ದಾರಂತೆ. ಇದು ಮನುಷ್ಯರ ಮತ್ತು ಪ್ರಾಣಿಗಳ ಮಲದಿಂದ ತಯಾರಾಗಿದ್ದು, ಕಲ್ಲುಗಳಿಗೆ ಸಾಥ್ ನೀಡುತ್ತಿದೆಯಂತೆ.



ಈ ಚಿತ್ರ ನೋಡಿ ಚಿಕ್ಕವರಿದ್ದಾಗ ಸೈಕಲ್ ಟೈರ್, ರಿಮ್ ಓಡಿಸಿದ ನೆನಪು ಮರುಕಳಿಸಿರಬಹುದು. ಇಂಗ್ಲೆಂಡ್‌ನ ಶಾಲೆಯೊಂದರಲ್ಲಿ ಫಲಿತಾಂಶ ಬಂದ ನಂತರ ಈ ಗಾಲಿಯನ್ನು ಓಡಿಸುವ ಸ್ಪರ್ಧೆ ನಡೆಸುತ್ತಾರಂತೆ. ಬದುಕಿನ ಗಾಲಿ ಓಡಿಸಲು ವಿದ್ಯಾರ್ಥಿಗಳು ಎಷ್ಟು ಸಮರ್ಥರು ಎಂಬುದನ್ನು ಈ ರೀತಿ ಪರೀಕ್ಷಿಸಬಾರದಿತ್ತು.

ಚೀನಾದ ಮಾತನಾಡುವ ರೊಬಾಟ್ ಜಿಯಾ ಜಿಯಾ ಚೀನಾದ ಗೋಡೆ ಎಲ್ಲಿದೆ ಎಂಬ ಪ್ರಶ್ನೆಗೆ ತಡವರಿಸುತ್ತ ಏನೇನೋ ಗೊಣ ಗೊಣ ಮಾಡಿ ನಪಾಸಾಯ್ತುಂತೆ. ಆದರೆ ನಿನ್ನ ವಯಸ್ಸೆಷ್ಟು ಎಂಬ ಪ್ರಶ್ನೆಗೆ ಕ್ಷಣ ಮಾತ್ರದಲ್ಲಿ 'ಅದು ದೊಡ್ಡ ರಹಸ್ಯ' ಎಂದು ಕಣ್ಣು ಮಿಟುಕಿಸಿತಂತೆ. ಹಾಗಾದರೆ ರೊಬಾಟ್ ತಯಾರಕರು ಪಾಸಾದಂತೆ.